ಆ) ಹಾಗಿದ್ದಲ್ಲಿ ಇದರಿಂದ ಪ್ರಾರಂಭಿಸಿದ ಉದ್ದಿಮೆಗಳಿಗೆ ತೊಂದರೆಯಾಗುವುದಿಲ್ಲವೆ?

ಇ) ಹಾಗಿದ್ದಲ್ಲಿ ಸದರಿ ಉದ್ದಿಮೆಗಳಿಗೆ ಯಾವಾಗ ಬಡ್ಡಿ ರಹಿತ ಸಾಲದ ಹಣವನ್ನು ನೀಡಲಾಗುವುದು?

ಶ್ರೀ ಜೆ. ಹೆಚ್. ಪಟೇಲ್ (ಕೈಗಾರಿಕಾ ಮತ್ತು ವಿದ್ಯುಚ್ಛಕ್ತಿ ಮಂತ್ರಿಗಳು). —

ಆ) ಹೌದು. ಕೆಲವು ಘಟಕಗಳಿಗೆ ಮಾತ್ರ ಮಂಜೂರಾಗಿರುವ ಬಂಡವಾಳ ಸಾಲ ಇನ್ನೂ ಬಿಡುಗಡೆಯಾಗಿಲ್ಲ.

ಆ) ಇಲ್ಲ.

ಇ) ಮಂಜೂರಾಗಿರುವ ಸಾಲವನ್ನು ಸಾಧ್ಯವಾದಷ್ಟು ಬೇಗ ಬಿಡುಗಡೆ ಮಾಡಲು ಸರ್ಕಾರವು ಎಲ್ಲಾ ಪ್ರಯತ್ನವನ್ನು ಮಾಡುವುದು.

ರಾಜ್ಯದಲ್ಲಿನ ರೇಷ್ಮೆ ಕೃಷಿಯ ಬಗ್ಗೆ

೧೦೨ (೩೮೨) ಶ್ರೀ ಜಿ. ರಾಜಗೌಡ (ಹನೂರು). —ಮಾನ್ಯ ರೇಷ್ಮೆ, ಪಶುಸಂಗೋಪನೆ ಮತ್ತು ಮತ್ಸ್ಯೋದ್ಯಮ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ: —

ಅ) ರಾಜ್ಯದಲ್ಲಿ ೧೯೮೫-೮೬, ೧೯೮೬-೮೭ರಲ್ಲಿ ರೇಷ್ಮೆ ವಿನಿಮಯ ಕೇಂದ್ರದಿಂದ, ಗೂಡಿನ ಮಾರುಕಟ್ಟೆಗಳಿಂದ ಗಳಿಸಿರುವ ದಲ್ಲಾಳಿ ಶುಲ್ಕ ಎಷ್ಟು ?

ಆ) ಈ ಹಣದಲ್ಲಿ ರೇಷ್ಮೆ ಕೃಷಿ ಹಾಗೂ ರೇಷ್ಮೆ ಉದ್ಯಮದ ಅಭಿವೃದ್ಧಿಗಾಗಿ ಎಷ್ಟು ಪೆಚ್ಚ ಮಾಡಲಾಗಿದೆ ?

ಇ) ರಾಜ್ಯದಲ್ಲಿ ಸೂಲು ಬಿಚ್ಚುವ ಘಟಕಗಳಿಂದ ಕಳೆದ ಮೂರು ವರ್ಷಗಳಿಂದಾಗಿರುವ ನಷ್ಟ ವೆಷ್ಟು ?

ಈ) ಇದನ್ನು ತಪ್ಪಿಸಲು ಕೈಗೊಂಡಿರುವ ಕಾರ್ಯಕ್ರಮಗಳೇನು ?

ಶ್ರೀ ಕೆ. ಎಂ. ಕೃಷ್ಣಾರೆಡ್ಡಿ (ರೇಷ್ಮೆ, ಪಶುಸಂಗೋಪನೆ ಮತ್ತು ಮತ್ಸ್ಯೋದ್ಯಮ ಮಂತ್ರಿಗಳು). —

ಅ) ರೇಷ್ಮೆ ವಿನಿಮಯ ಕೇಂದ್ರ ಮತ್ತು ರೇಷ್ಮೆಗೂಡಿನ ಮಾರುಕಟ್ಟೆಗಳಲ್ಲಿ ದಲ್ಲಾಳಿ ಶುಲ್ಕ ವಸೂಲಿ ಮಾಡುತ್ತಿಲ್ಲ. ಆದರೆ ಮಾರುಕಟ್ಟೆ ಶುಲ್ಕವನ್ನು ವಸೂಲು ಮಾಡಲಾಗುತ್ತಿದೆ.

೧೯೮೫-೮೬, ೧೯೮೬-೮೭ನೇ ಸಾಲಿನ ಡಿಸೆಂಬರ್ ೧೯೮೭ ಅಂತ್ಯದವರೆಗೆ ಗಳಿಸಿರುವ ಮಾರುಕಟ್ಟೆ ಶುಲ್ಕ ರೂ. ೮೨೧.೩೯ ಲಕ್ಷಗಳು. ವಿವರಗಳು ಈ ಕೆಳಕಂಡಂತಿವೆ.

	೧೯೮೫-೮೬	೧೯೮೬-೮೭ (ಡಿಸೆಂಬರ್ ೮೭ರ ಅಂತ್ಯದವರೆಗೆ)
ರೇಷ್ಮೆ ವಿನಿಮಯ ಕೇಂದ್ರಗಳು	೧೨೮.೭೧	೧೦೬.೮೮
ರೇಷ್ಮೆ ಗೂಡಿನ ಮಾರುಕಟ್ಟೆಗಳು	೩೩೬.೧೫	೨೫೦.೪೪೦
ಒಟ್ಟು	೪೬೪.೮೬	೩೫೬.೩೭

ಆ) ೧೯೭೯-೮೦ರ ಡಿಸೆಂಬರ್‌ನಿಂದ ರೇಷ್ಮೆ ವಿನಿಮಯ ಕೇಂದ್ರ ಮತ್ತು ರೇಷ್ಮೆ ಗೂಡಿನ ಮಾರುಕಟ್ಟೆಗಳಲ್ಲಿ ಗಳಿಸಿದ ಮಾರುಕಟ್ಟೆ ಶುಲ್ಕವನ್ನು ಜೆಲೆ ಸ್ಥಿರೀಕರಣ ನಿಧಿಗೆ ಜಮಾ ಮಾಡಲಾಗುತ್ತಿದೆ. ೧೯೮೫-೮೬ ಮತ್ತು ೧೯೮೬-೮೭ ನೇ ಸಾಲಿನ ಡಿಸೆಂಬರ್ ಅಂತ್ಯದವರೆಗೆ ರೂ. ೧೦.೪೩೦ ಲಕ್ಷಗಳನ್ನು ವೆಚ್ಚ ಮಾಡಲಾಗಿದೆ.

ರೇಷ್ಮೆ ಇಲಾಖೆಯ ಅಧೀನದಲ್ಲಿರುವ ಸರ್ಕಾರಿ ರೇಷ್ಮೆ ಕಾರ್ಖಾನೆಗಳಲ್ಲಿ ಕಳೆದ ಮೂರು ವರ್ಷಗಳಲ್ಲಿ (೧೯೮೩-೮೪ ರಿಂದ ೧೯೮೫-೮೬ರವರೆಗೆ) ರೂ. ೪೫೫.೭೮ ಲಕ್ಷ ನಷ್ಟವಾಗಿದೆಯೆಂದು ಅಂದಾಜು ಮಾಡಲಾಗಿದೆ. ವಿವರಗಳು ಈ ಕೆಳಕಂಡಂತಿವೆ.

		೧೯೮೩-೮೪	೧೯೪-೮೫	೧೯೫-೮೬
		೧	೨	೩
			(ಲಕ್ಷ ರೂ.ಗಳಲ್ಲಿ)	
೧.	ಸರ್ಕಾರಿ ರೇಷ್ಮೆ ಕಾರ್ಖಾನೆ ಕೊಳ್ಳೇಗಾಲ	೫೧.೬೬	೬೧.೬೪	೫೪.೮೦
೨.	ಸರ್ಕಾರಿ ರೇಷ್ಮೆ ಕಾರ್ಖಾನೆ, ಸಂತೇಮಾರಹಳ್ಳಿ	೩೧.೧೯*	೩೩.೭೪	೨೭.೬೯
೩.	ಸರ್ಕಾರಿ ರೇಷ್ಮೆ ಕಾರ್ಖಾನೆ, ಚಾಮರಾಜನಗರ	೩೯.೬೩*	೨೪.೫೯	೨೪.೩೮
೪.	ಸರ್ಕಾರಿ ರೇಷ್ಮೆ ಕಾರ್ಖಾನೆ, ಮಾಂಬಳ್ಳಿ	೨೯.೬೪	೧೭.೩೭	೧೭.೮೯
೫.	ಸರ್ಕಾರಿ ನೇಯ್ಗೆ ಮತ್ತು ಹುರಿ ಮಾಡುವ ಕಾರ್ಖಾನೆ, ಮುಡಿಗುಂಡಂ	೧೨.೧೫	೧೪,೨೦	೧೫.೨೧
	ಒಟ್ಟು	೧೬೪.೭೭	೧೫೧.೫೪	೧೫೯.೭೭

* ಲೆಕ್ಕ ಪತ್ರಗಳ ಪರಿಶೋಧನೆಯ ನಂತರದ ವಿವರಗಳು.

ಈ) ನಷ್ಟವನ್ನು ತಪ್ಪಿಸಲು ತೆಗೆದುಕೊಂಡ ಕ್ರಮಗಳು.

೧) ಪ್ರತಿ ಬೇಸಿನಿನ ಉತ್ಪಾದನೆಯನ್ನು ಅಧಿಕಗೊಳಿಸುವಂತೆ ಕಾರ್ಮಿಕರ ಸಂಧಾನದಲ್ಲಿ ಒಪ್ಪಂದ ಮ್ನಾಡಿಕೊಂಡಿರುವುದು.

೨) ಏಳನೇ ಪಂಚವಾರ್ಷಿಕ ಯೋಜನೆಯಲ್ಲಿ ಹಳೆಯ ಮತ್ತು ಫಲಕಾರಿಯಲ್ಲದ ಯಂತ್ರೋಪಕರಣಗಳ ಬದಲಿಕೆ ಹಾಗೂ ನವೀಕರಣ ಮಾಡಲು ಉದ್ದೇಶಿಸಿರುವುದು.

೩) ವಯಸ್ಸಾದ ಹಾಗೂ ಅದಕ್ಷ ಕಾರ್ಮಿಕರನ್ನು ಸ್ವಯಂ ಪ್ರೇರಣೆಯಿಂದ ನಿವೃತ್ತಿ ಗೊಳಿಸಲು ಮತ್ತು ಈ ಕಾರ್ಮಿಕರ ಬದಲು ದಕ್ಷ ಕಾರ್ಮಿಕರನ್ನು ನೇಮಿಸಲು ಕಾರ್ಮಿಕರ ಸಂಘಾನದಲ್ಲಿ ಅನುವು ಮಾಡಿಕೊಂಡಿರುವುದು.

೪) ಉತ್ಪತ್ತಿ ಉತ್ತೇಜನಪನ್ನು ನೀಡುವುದು.

೫) ರೇಷ್ಮೆ ಗುಣಮಟ್ಟವನ್ನು ಉತ್ತಮಪಡಿಸುತ್ತಿರುವುದು.

ರಾಜ್ಯ ಸರ್ಕಾರದ ಕೈಮಗ್ಗ ಉದ್ದಿಮೆಗೆ ನಬಾರ್ಡ್ ಸಹಾಯಧನ

೧೦೩ (೧೨೩) ಶ್ರೀ ಬಾಬುರೆಡ್ಡಿ ವಿ. ತುಂಗಳ್ (ಬೀಳಗಿ).—ಮಾನ್ಯ ವಾಣಿಜ್ಯ ಕೈಗಾರಿಕೆ ಮತ್ತು ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ರಾಜ್ಯದಲ್ಲಿ ಕೈಮಗ್ಗದ ನೇಕಾರ ಸಹಕಾರಿ ಸಂಘಗಳಿಗೆ ನಬಾರ್ಡ್ ಸಂಸ್ಥೆಯಿಂದ ೧೯೮೪, ೧೯೮೫, ೧೯೮೬, ೧೯೮೭ನೇ ಸಾಲುಗಳಲ್ಲಿ ಮಂಜೂರಾದ ವಿವಿಧ ಧನಸಹಾಯವೆಷ್ಟು?

ಆ) ನೆರೆಯ ರಾಜ್ಯಗಳಾದ ಮಹಾರಾಷ್ಟ್ರ, ಆಂಧ್ರಪ್ರದೇಶ, ತಮಿಳುನಾಡು, ಕೇರಳ ರಾಜ್ಯಗಳು ತಮ್ಮ ರಾಜ್ಯ ಪಡೆದಿರುವ ಸಹಾಯಧನಕ್ಕಿಂತ ಸುಮಾರು ೩೦ ಪಟ್ಟು ಹೆಚ್ಚಿನ ಧನಸಹಾಯ ಪಡೆದಿರುವ ಸರ್ಕಾರದವರ ಗಮನಕ್ಕೆ ಬಂದಿದೆಯೆ ?

ಇ) ಅತಿ ಕನಿಷ್ಠ ಸಹಾಯಧನ ಪಡೆದು ರಾಜ್ಯದಲ್ಲಿಯ ಕೈಗಾರಿಕೋದ್ಯಮವು ಅಭಿವೃದ್ಧಿ ಹೊಂದದಿರಲು ಕಾರಣರಾರು ?

ಈ) ಈ ದಿಶೆಯಲ್ಲಿ ಕೈಗಾರಿಕೋದ್ಯಮವನ್ನು ಅಭಿವೃದ್ಧಿಪಡಿಸಲು ಸರ್ಕಾರದವರು ಕೈಗೊಳ್ಳುವ ಕ್ರಮಗಳು ಏನು ?